ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Friday, the 15th July 1977/Ashada 24, 1899 S.E.

The House met in the Assembly Chamber, Vidhana Soudha, at One of the Clock.

[MADAM SPEAKER (SMT. K. S. NAGARATHNAMMA) in the Chair]

STARRED QUESTIONS
(To which Oral Answers were given)

SRI H. M. CHANNABASAPPA.—Before taking up the Questions, I would like to make a submission. The other House is meeting at 1-30 P.M. I have to go to that House also to answer the Questions. I request the Hon. Chair first to take up the Questions standing in the name of the Chief Minister, for which I have to answer.

MADAM SPEAKER.—Which are those questions.

SRI H. M. CHANNABASAPPA.—Question Nos. 173 and 364.

MADAM SPEAKER.—Yes.

Construction of Police Quarters in Dandinasivara

173. SRI B. BHYRAPPAJI (Turuvekere).—Will the Chief Minister be pleased to state :—

(*a*) the date on which the Range Police Office of Dhandinasivara of Turuvekere Taluk, was started ;

(*b*) whether representations have been received for providing quarters to the said staff ;

(*c*) if so, action taken to construct the quarters ?

SRI H. M. CHANNABASAPPA (Health Minister) [on be half of. SRI D. DEVARAJ URS (Chief Minister)].—

(*a*) 23-6-1969

(*b*) Yes

(*c*) In this regard action has been taken to provide funds in this year's budget 1977-78.

ಇಲ್ಲಿ (ಇ) ಪ್ರಶ್ನೆಗೆ ಉತ್ತರವಾಗಿ ಈ ಬಗ್ಗೆ ಹಣವನ್ನು 1977-78ನೆಯ ಸಾಲಿನ ಅಂದಾಜು ಪಟ್ಟಿಯಲ್ಲಿ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಲಾಗಿದೆ. ಆದರೆ ಈ ವರ್ಷದ ಬಡ್ಜೆಟ್‌ನಲ್ಲಿ ಈ ಬಗ್ಗೆ ಹಣವನ್ನು ಒದಗಿಸಿಲ್ಲ.

ಶ್ರೀ ಬಿ; ಬೈರಪ್ಪಾಜಿ —ಅದು ನನಗೂ ಗೊತ್ತಿದೆ. ಅಮ್ಮಸಂದ್ರ ಸಿಮೆಂಟ್ ಕಾರ್ಖಾನೆ ಹತ್ತಿರವಿರುವುದರಿಂದ, ಅಲ್ಲಿ ಕೂಲಿಗಾರರ ಹಾಗೂ ಅಧಿಕಾರಿಗಳ ಸಂಖ್ಯೆ ಹೆಚ್ಚಾಗಿದ್ದು ಮನೆಗಳು ಸಿಗುವುದೇ ಕಷ್ಟವಾಗಿದೆ. ಆದ್ದರಿಂದ ಇವರಿಗೆ ಮನೆಗಳನ್ನು ಯಾವಾಗ ಕಟ್ಟಿಸಿಕೊಡುತ್ತೀರಾ ? ಬಡ್ಜೆಟ್‌ನಲ್ಲಿ ಹಣ ಒದಗಿಸದಿರಲು ಕಾರಣವೇನು ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಇದರ ಅವಶ್ಯಕತೆ ಇದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಸಲದ ಬಡ್ಜೆಟ್‌ನಲ್ಲಿ ಸೇರಿಸಬೇಕೆಂದು ಐ. ಪಿ. ಪಿ. ಅವರಿಂದ ಪ್ರಪೋಸರ್ ಬಂದಿತ್ತು. ಆದರೂ ಸೇರ್ಪಡೆ ಮಾಡಿಲ್ಲ. ಆದರೆ ಈ ಕೆಲಸವಾಗಬೇಕೆಂಬುದು ಸರ್ಕಾರದ ಮನಸ್ಸಿನಲ್ಲಿರುವುದರಿಂದ making Reappropriation on a phased programme, we shall try to take it.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈ ಬಗ್ಗೆ 1959ನೇ ಇಸವಿಯಿಂದಲೂ ಮನವಿಗಳು ಬರುತ್ತಿದ್ದರೂ ಸಹ ಇಲ್ಲಿಯವರೆಗೆ ಕಟ್ಟಿಸದಿರಲು ಕಾರಣವೇನು ? ಒಂದು ಕಡೆ ಇದರ ಅವಶ್ಯಕತೆ ಇದೆ, ಆಡಿಷನರ್ ಗ್ರಾಂಟ್‌ನಲ್ಲಿ ಇದನ್ನು ಸೇರಿಸುತ್ತೇವೆಂದು ಹೇಳುತ್ತಿದ್ದೀರಿ, ಆದರೆ ಇಲ್ಲಿಯವರೆಗೆ ಕಟ್ಟಿಸದಿರಲು ಕಾರಣವೇನು ? ಇಲ್ಲಿಯವರೆಗೆ ಅಲ್ಲಿಂದ ಪಿ ಎಸ್. ಪಿ. ಯಿಂದ ವಿಧಾನಸಭಾ ಸದಸ್ಯರು ಆರಿಸಿ ಬರುತ್ತಿದ್ದರೆಂಬ ಕಾರಣದಿಂದ ಕಟ್ಟಿಸಲಿಲ್ಲವೇ ಹೇಗೆ ? ಈಗ ಕಾಂಗ್ರೆಸ್ ಸದಸ್ಯರೇ ಆ ಭಾಗದಿಂದ ಆರಿಸಿ ಬಂದಿರುವುದರಿಂದ ಈ ಕೆಲಸವನ್ನು ಕೂಡಲೇ ಮಾಡಿ ಕೊಡುತ್ತೀರಾ ?

SRI H. M. CHANNABASAPPA.—The interference of the Hon. Member is totally incorrect. The question is about the date on which the Range Police Office of Dhantinasivara of Turuvekere Taluk was started. I have given the date on which it was started. That was not the date of the representation.

ಶ್ರೀ ಬಿ. ಬೈರಪ್ಪಾಜಿ —1959ನೇ ಇಸವಿಯಲ್ಲಿ ಅಲ್ಲಿ ರೇಂಜ್ ಪೋಲೀಸ್ ಆಫೀಸ್ ಪ್ರಾರಂಭವಾಯಿತು. ಅಲ್ಲಿಂದೀಚೆಗೆ ಪ್ರತಿವರ್ಷವೂ ಅಲ್ಲಿಯ ಸಿಬ್ಬಂದಿವರ್ಗಕ್ಕೆ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಮತ್ತು ಈ ಬಗ್ಗೆ ಹಣವನ್ನು ಬಡ್ಜೆಟ್‌ನಲ್ಲಿ ಸೇರಿಸಬೇಕೆಂದು ಮನವಿಗಳನ್ನು ಕೊಟ್ಟು ಕೇಳುತ್ತಲೇ ಇದ್ದಾರೆ. ನಾನೂ ಸಹ ಎಷ್ಟೋ ಸಲ ಹೇಳಿದ್ದೇನೆ ಈಗ ರೀ-ಅಪ್ರೊಪ್ರಿಯೇಷನ್‌ನಲ್ಲಿ ಇದಕ್ಕೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಿದ್ದಿರಿ. ಆದ್ದರಿಂದ ಕಾವು ಈ ವರ್ಷವೇ ಈ ಕೆಲಸವನ್ನು ಮಾಡಿಕೊಡುತ್ತೇವೆಂದು ಈ ಮನೆಗೆ ಭರವಸೆ ಕೊಡಬೇಕು

ಶ್ರೀ ಎಚ್. ಎಂ. ಚನ್ನಬಸಪ್ಪ, —ನಾನು ಮೊದಲು ಹೇಳಿದ್ದು ಬೇರೆ, ಭರವಸೆ ಬೇರೆ ಏನು ? ನಾನು ಮೊದಲು ಹೇಳಿದ್ದೇ ಭರವಸೆ.

ಶ್ರೀ ಎಂ ಎಸ್. ಕೃಷ್ಣನ್.—ಅಲ್ಲಿ ಎಷ್ಟು ಜನರಿಗೆ ಮನೆಗಳನ್ನು ಕಟ್ಟಿಸಬೇಕಾಗುತ್ತದೆ ಮತ್ತು ಫೇಸ್ಡ್ ಪ್ರೊಗ್ರಾಮ್‌ನಲ್ಲಿ ಎಷ್ಟೆಷ್ಟು ಜನರಿಗೆ ಮನೆಗಳನ್ನು ಎಷ್ಟು ವರ್ಷಗಳಲ್ಲಿ ಕಟ್ಟಿಸಿ ಮುಗಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ —ಅಲ್ಲಿ ಒಬ್ಬರು ಸಬ್-ಇನ್ಸ್‌ಪೆಕ್ಟರ್, ಇಬ್ಬರು ಹೆಡ್ ಕಾನ್ಸ್‌ಟೇಬಲ್‌ಗಳು, 9 ಜನ ಪೋಲೀಸ್ ಕಾನ್ಸ್‌ಟೇಬಲ್‌ಗಳಿದ್ದಾರೆ. ಅಷ್ಟು ಜನರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕಾಗಿದೆ. ಈಗಾಗಲೇ ಅಲ್ಲಿ ಪೋಲೀಸ್ ಠಾಣೆಯನ್ನು ಕಟ್ಟಿ ಮುಗಿಸಿದ್ದೇವೆ. ಮನೆಗಳನ್ನು ಈ ವರ್ಷ ಮತ್ತು ಮುಂದಿನ ವರ್ಷದೊಳಗೆ ಪೂರೈಸಬೇಕೆಂದಿದ್ದೇವೆ.

†indicate that remarks or speeches have not been revised by the member concerned.